INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -4, November-December, 2022,
Page No,74- 86
Peer Reviewed Journal, Referred Journal

# ನಿಜಾಂ ಕರ್ನಾಟಕದಲ್ಲಿ ಕಮ್ಯುನಿಸ್ಟ್ ನಾಯಕರಾದ ವಿ.ಎನ್ ಪಾಟೀಲರವರ ಕೊಡುಗೆಗಳು.

**ಸೀತಾರಾಮು.ಎಸ್.[1]**

ಹೈದರಾಬಾದ್ ಕರ್ನಾಟಕದಲ್ಲಿ ಕಮ್ಯುನಿಸ್ಟ್ ಹೋರಾಟಗಾರರಲ್ಲಿ ಪ್ರಮುಖರಾದವರೆಂದರೆ ವಿ.ಎಸ್ ಪಾಟೀಲರವರು. ಇವರು ಮಹಾ ಮುತ್ಸದ್ಧಿಯಾಗಿದ್ದರು. ಹೈದರಬಾದ್ ಕರ್ನಾಟಕದಲ್ಲಿ ಈ ಭಾಗದಲ್ಲಿ ರಾಜಕೀಯವಾಗಿ ಬಹುದೊಡ್ಡ ಕ್ರಾಂತಿ ಮಾಡಿದರು. ಇವರು ಬಸವತತ್ವದ ಸಮತಾವಾದವನ್ನು, ದಾಸೋಹ ತತ್ವವನ್ನು ಆಚರಣೆಯಲ್ಲಿ ತಂದ ಶ್ರೀಯುತರ ಬದುಕು ಬಹಳ ಮಹತ್ವದ್ದು.

**ಜನನ:**ವಿಶ್ವನಾಥ ಪಾಟೀಲರು ಮೀನ ಕೇರಿಯಿಂದ 8 ಕಿ.ಮೀ ದೂರವಿರುವ ವಗದಳ(ಬಲದಲ) ಗ್ರಾಮ ಇದು ಪುರಾತನವಾದ ಗ್ರಾಮ. ಈ ಗ್ರಾಮವು ಕಲ್ಯಾಣದ 6ನೇ ವಿಕ್ರಮಾದಿತ್ಯನ ಆಡಳಿತಕ್ಕೆ ಒಳಪಟ್ಟಿತ್ತು. ಚಾಲುಕ್ಯ ವಿಕ್ರಮನಿಗೆ 19 ಜನ ಮಡದಿಯತು, ಇವರಲ್ಲಿ ಶ್ರೇಯಾದೇವಿ ಎಂಬ ಹೆಸರಿನ ರಾಣಿ ಬಗದಲದಲ್ಲಿರುತ್ತದ್ದಳು, ರಾಜನು ಶ್ರೇಯಾದೇವಿಗೆ ಬಳುವಳಿಯಾಗಿ ಸುತ್ತಲಿನ ಊರುಗಳನ್ನು ಕೊಟ್ಟಿದ್ದನು. ಇಂತಹ ಐತಿಹಾಸಿಕ ಪ್ರಸಿದ್ಧ ಸ್ಥಳವಾದ ಬಗದಳದ ಮೀನಕೇರಿ (ಮೀನಕೇರಿ) ವಿ.ಎನ್. ಪಾಟೀಲ್‌ರ ಜನ್ಮಸ್ಥಳವಾಗಿತ್ತು. (ವಿಶ್ವನಾಥ ಪಾಟೀಲರು) ಇವರ ತಾಯಿಯಾದ ಕಾಶಿಬಾಯಿಯವರು ಬಗದಲ್‌ನ ಬೀರ್ಗೆ ಮನೆತವದವರು. ಗಾಂಭೀರ್ಯದಿಂದ ಕೂಡಿದ ಅವರ ಮುಖಮುದ್ರೆ ರಾಜದೀವಿಯಂತಿತ್ತು. ಸಾಮಾನ್ಯ ಮಹಿಳೆಯರಂತೆ ಕಾಣುತ್ತಿರಲಿಲ್ಲ, ಅವರ ಹಣೆಯ ಮೇಲೆ ಒಂದು ರೂಪಾಯಿ ಅಗಲದಷ್ಟು ಕುಂಕುಮ ರಾರಾಜಿಸುತ್ತಿತ್ತು.

ಕಾಶಿಬಾಯಿಯವರಿಗೆ ಇಬ್ಬರು ಗಂಡು ಮಕ್ಕಳು, ಹಿರಿಯ ಮಗನ ಹೆಸರು ವೀರಭದ್ರಪ್ಪಗೌಡ, ಇವರು 7ನೇ ತರಗತಿಯವರೆಗೆ ಕಲಿತ್ತಿದ್ದರು. ಕಿರಿಯ ಮಗನೇ ವಿ.ಎನ್.ಪಾಟೀಲರು (ವಿಶ್ವನಾಥ ಪಾಟೀಲುರು) ವಿ.ಎನ್.ಪಾಟೀಲರಿಗೆ 3 ಜನ ಸಹೋದರಿಯರಿದ್ದರು.ಬೆಳೆಯುವ ಸಿರಿ ಮೊಳಕೆಯಲ್ಲಿ ಎನ್ನುವಂತೆ ವಿಶ್ವನಾಥ ಪಾಟೀಲರ ಬಾಲ್ಯದ ವರ್ತನೆ ಬಿಗು ಸ್ವಭಾವ ಹಾಗೂ ಲಕ್ಷಣವನ್ನು ಕಂಡು ಈ ಹೇಳಿಕೆಯನ್ನು ಹೇಳುತ್ತಾರೆ, ವಿಶ್ವನಾಥ ಪಾಟೀಲರು ಚಿಕ್ಕರವಾಗಿದ್ದಾಗ ಕೂಡ ಗಂಭೀರ ವ್ಯಕ್ತಿಗಳಾಗಿದ್ದರು. ಪಾಟೀಲರ ಮೇಲೆ ತಾಯಿ ಕಾಶಿಬಾಯಿಯವರ ಪ್ರಭಾವ ಅಪಾರವಾಗಿ ಬೀರಿತು. ಮೀನಕೇರಿಯಲ್ಲಿ

[1].ಸಂಶೋಧನಾ ವಿದ್ಯಾರ್ಥಿ.ಇತಿಹಾಸ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು

ಮರಾಠಿ ಮತ್ತು ಉರ್ದು ಕಲಿಸುವ ಖಾಸಗಿ ಶಿಕ್ಷಕರಿದ್ದರು. ಕನ್ನಡ ಯಾರಿಗೂ ಬರುತ್ತಿರಲಿಲ್ಲ, ಇವರ ಚಿಕ್ಕಪ್ಪಂದಿರಾದ ಗಿರಿಯಪ್ಪಗೌಡರು ತನ್ನ ಅಣ್ಣನ ಮಗನಾದ ಪಾಟೀಲರನ್ನು ಮಾತೃಭಾಷೆಯಾದ ಕನ್ನಡದಲ್ಲಿಯೇ ಕಲಿಸಬೇಕೆಂದು ನಿರ್ಧಾರ ಮಾಡಿದರು.

**ಕನ್ನಡದ ಪ್ರೀತಿ :** ಬೀದರಿನ ಉತ್ತರಕ್ಕಿರುವ ಶಹಾಪುರ (ಈಗ ತೆಲಾಂಗಣದಲ್ಲಿದೆ) ಗ್ರಾಮ ಮಾಂಜ್ರಾ ನದಿಯ ದಂಡೆಯ ಮೇಲಿದೆ. ಪಾಟೀಲರ ಚಿಕ್ಕಪ್ಪನಾದ ಗಿರಿಯಪ್ಪಗೌಡರ ನೆಂಟರು ಶಹಾಪೂರಿನರು. ಇವರು ಮೇಲಿಂದ ಮೇಲೆ ಶಹಾಪುರಕ್ಕೆ ಬರುತ್ತಿದ್ದರು. ಶಹಾಪುರದಿಂದ ಸ್ವಲ್ಪದೂರ ಮೋರಗಿ ಎಂಬ ಗ್ರಾಮದಲ್ಲಿ 1935ರಲ್ಲಿ ಭಾಲ್ಕಿಯ ಚನ್ನಬಸವ ಪಟ್ಟದೇವರು ಕನ್ನಡ ಶಾಲೆಯನ್ನು ತೆರೆದರು. ಬಸವ ಜಯಂತಿಯ ಶುಭ ಸಂದರ್ಭದಲ್ಲಿ ಕನ್ನಡ ಕಲಿಸುವ ಶಾಲೆಯೊಂದು ಬೀದರ ಜಿಲ್ಲೆಯಲ್ಲಿ ಪ್ರಥಮ ಸಲ ಪ್ರಾರಂಭವಾಯಿತು. ಇದನ್ನು ಅರಿತ ಗಿರಿಯಪ್ಪನವರು ಎಂಟು ವರ್ಷದ ಬಾಲಕನಾದ ವಿ.ಎನ್.ಪಾಟೀಲರನ್ನು ಈ ಶಾಲೆಗೆ ಸೇರಿಸಿದರು.

**ಮೋರ್ಗಿ ಶಾಲೆಯಲ್ಲಿ ವಿ.ಎನ್ ಪಾಟೀಲ್‌ರ ಮೇಲೆ ಮೊರ್ಗಿ ಶಾಲೆಯ ಪ್ರಭಾವ**

ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಮೊರ್ಗಿ ಗ್ರಾಮಕ್ಕೆ ಮಹತ್ವದ ಸ್ಥಾನವಿದೆ. ಸುಮಾರು 5 ವರ್ಷ ಎಲ್ಲಾ ಕನ್ನಡ ಶಾಲೆ ನಡೆಯಿತು. ಕನ್ನಡ ಕಲಿಸುವ ಶಿಕ್ಷಕರನ್ನು ಬಾಲ್ಕಿ ಹೀರೇಮಠ ಸಂಸ್ಥಾನದ ಪೂಜ್ಯ ಶ್ರೀ ಚನ್ನಬಸವ ಪಟ್ಟದೇವರು, ಕಲುಬರುಗಿ ಜಿಲ್ಲೆಯವರಾದ ಮಹಾದೇವಪ್ಪ ಮಾಸನೂರಕರ್ ಬಳ್ಳಾರಿಯ ಸಿದ್ದೇಶ್ವರ, ಕಲಬುರುಗಿ ಜಿಲ್ಲೆಯ ಬೆಂಡೆಗುಂಬಳಿಯ ಸಿದ್ದಿರಯ್ಯ ಮತ್ತು ರೇವಣ್ಣ ಸಿದ್ದಯ್ಯ ಮುಂತಾದವರನ್ನು ಕರೆಸಿಕೊಂಡರು. ಈ ಶಿಕ್ಷಕರಿಗೆ ತಿಂಗಳಿಗೆ 12 ರೂ. ಸಂಬಳ ಊಟ ಮತ್ತು ವಸತಿ ಉಚಿತವಾಗಿ ಒದಗಿಸಲಾಗುತ್ತಿತ್ತು. ಶಾಲೆಯ ಖರ್ಚುನ್ನು ಮಾಡದ 40 ಎಕರೆ ಭೂಮಿಯಿಂದ ಬರುವ ಆದಾಯ ಹಾಗೂ ಸುತ್ತಮುತ್ತಲಿನ ಊರುಗಳಿಂದ ಮುಷ್ಠಿಫಂಡ್ ಧಾನದಿಂದ ಸಾಗುತ್ತಿತ್ತು. ಧಾನ್ಯಗಳನ್ನು ತರಲು ಎರಡು ಕುದುರೆಗಳಿದ್ದವು. ವಾರಕ್ಕೊಮ್ಮೆ ಊರುಗಳಿಗೆ ಹೋಗಿ ಸಂಗ್ರಹಿಸುತ್ತಿದ್ದರು. ಜೋಳ ಬಿಸುವುದಕ್ಕಾಗಿಯೇ ಇಬ್ಬರನ್ನು ನೇಮಿಸಲಾಗಿತ್ತು. ಈ ಶಾಲೆಯಲ್ಲಿ ಒಟ್ಟು 50 ಹುಡುಗರು ಇಲ್ಲಿ ಅಭ್ಯಾಸ ಮಾಡುತ್ತಿದ್ದರು. ಈ ಶಾಲೆಯ ಸ್ವಾಮಿಗಳು ಹುಡುಗರೊಂದಿಗೆ ಕೆಲಸವನ್ನು ಮಾಡುತ್ತಿದ್ದರು. ಹಾಗೂ ಸಾಯಂಕಾಲ ಮಕ್ಕಳೊಂದಿಗೆ ಚಂಡಿನ ಆಟ, ಕಬ್ಬಡಿ ಆಟ ಆಡುತ್ತ ಮಕ್ಕಳ ಮನಸ್ಸನ್ನು ಮನೆಯ ಕಡೆ ಹೋಗದಂತೆ ನೋಡಿಕೊಳ್ಳುತ್ತಿದ್ದರು.ಈ ಶಾಲೆಯಲ್ಲಿ ಎಲ್ಲಾ ಕುಲದವರು ಒಟ್ಟಾಗಿ ಕಲಿಯುತ್ತಿದ್ದರು ಕೆಲವು ಅರಿಯದ ಅಜ್ಞಾನಿಗಳು ಹಾಗೂ ಕೆಲವು ಜಾತಿವಾದಿ ಜಂಗಮರು ಅಶ್ಲೀಲ ಭಾಷೆಯಿಂದ ಸ್ವಾಮಿಗಳನ್ನು ಕುಲಗೇಡಿ ಕುಲಕೆಡಿಸುವನೆಂದು ಬಯ್ಯುತ್ತಿದ್ದರು. ಈ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಎಲ್ಲಾ

ವಿದ್ಯಾರ್ಥಿಗಳು ಒಂದೇ ಕುಲದವರು ಹಾಗೂ ಒಂದೇ ಕುಟುಂಬದಂತೆ ಒಂದೇ ಪಂಕ್ತಿಯಲ್ಲಿ ಊಟ ಮಾಡುತ್ತಿದ್ದರು ಈ ರೀತಿಯಿಂದ ಸಹಪಂತಿ ಭೋಜನವನ್ನು ಜಾತಿವಾದಿಗಳು ಸಹಿಸುತ್ತಿರಲಿಲ್ಲ

ವಿ.ಎನ್ ಪಾಟೀಲರು ಜಾತಿ ಭೇದ ಮಾಡದೆ ಎಲ್ಲಾ ಹುಡುಗರಿಗೂ ಲಿಂಗ ಕಟ್ಟುತ್ತಿದ್ದರು, ಮನಸ್ಸಿಲ್ಲದವರಿಗೆ ಕಟ್ಟುತ್ತಿರಲಿಲ್ಲ ವಿ ಎನ್ ಪಾಟೀಲರ ಮೇಲೆ ಈ ಶಾಲೆಯು ಅಳಿಸಲಾರದ ಪ್ರಭಾವ ಬೀರಿತು ಪಾಟೀಲರ ಮೇಲೆ ಎಲ್ಲರೂ ಕೂಡಿ ಉಣ್ಣುವುದು (ಸಹ ಪಂಕ್ತಿ ಭೋಜನ) ಅಸ್ಪೃಶ್ಯತೆ ಆಚರಿಸದೆ ಇರುವುದು ಜಾತಿ ಭೇದ ಮಾಡದಿರುವುದು ಪಟ್ಟದೇವರು ಆಚರಿಸುತ್ತಿದ್ದ ತತ್ವಗಳನ್ನು ಪಾಟೀಲರು ತಮ್ಮ ಜೀವಮಾನ ಪರ್ಯಂತ ಪಾಲಿಸಿಕೊಂಡು ಬಂದರು ಈ ಶಾಲೆಯ ತತ್ವಗಳು ಅಥವಾ ಪ್ರಭಾವದಿಂದಲೇ ಮುಂದೆ ಕಮ್ಯುನಿಸ್ಟ್ ಪಕ್ಷವನ್ನು ಅಪ್ಪಿದರು ಕಾಗೆ ಒಂದು ಅಗುಳ ಕಂಡರೆ ಕರೆಯದೆ ತನ್ನ ಬಳಗವನ್ನೆಲ್ಲವ ಈ ವಚನ ಸಮಾಜವಾದದ ಕಮುನಿಸ್ಟ್ ಸಿದ್ಧಾಂತಕ್ಕೆ ಹತ್ತಿರವಾಗಿರುವುದರಿಂದ ಅವರ ಮೇಲೆ ಹೆಚ್ಚಿನ ಪ್ರಭಾವ ಬೀರಿತು. ವಿ.ಎನ್ ಪಾಟೀಲರ ಮೇಲೆ ಚಿಂಚೋಳಿ ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಸೈಯಾದ್ ಗೌಸ್ ಪ್ರಭಾವ ದಟ್ಟವಾಗಿ ಬೀರಿತು ಮುಂದೆ ಪಾಟೀಲರ ವ್ಯಕ್ತಿತ್ವ ರೂಪಗೊಂಡಿತು ಗೌಸರಿಂದಲೇ ಎಂದು ಹೇಳಬಹುದು.

**ದಾಂಪತ್ಯ ಜೀವನ**

ಮಾನವನ ಬದುಕಿನ ವಿಕಾಸಕ್ಕೆ ದಾಂಪತ್ಯವೇ ಬುನಾದಿ, ಹೀಗಾಗಿ ವಿ.ಎನ್ ಪಾಟೀಲರು ದಾಂಪತ್ಯ ಜೀವನಕ್ಕೆ ಹಣಿಯಾದರು. ಕಮಲಾಪುರ ಊರಿನ ಶಿವರಾಜ ಪಾಟೀಲ ಎಂಬುವವರ ಬೀದರಿನಲ್ಲಿ ಅಡತಿ ಅಂಗಡಿ ಇಟ್ಟಿದ್ದರು ವಿ.ಎನ್ ಪಾಟೀಲರ ಗುಣ ಸ್ವಭಾವ ಅವರಿಗೆ ಹಿಡಿಸಿತು. ತಮ್ಮ ಮಗಳಾದ ಚಂಗಳದೇವಿಯನ್ನು ವಿವಾಹ ಮಾಡಿಕೊಡಬೇಕೆಂದು ನಿಶ್ಚಯಿಸಿದರು. ವಿದ್ಯಾರ್ಥಿ ಜೀವನದಲ್ಲಿಯೇ ಅವರ ವಿವಾಹವಾಯಿತು (1946ರಲ್ಲಿ), ಮದುವೆಯಾದ ನಂತರ ಬಹಳಷ್ಟು ಬಾಲಕರು ವಿಲಾಸಿ ಜೀವನದಲ್ಲಿ ಕಾಲ ಕಳೆಯುತ್ತಾರೆ ಯಾವುದೇ ಸಾಮಾಜಿಕ ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿ ತೋರುವುದಿಲ್ಲ ಆದರೆ ವಿ.ಎನ್ ಪಾಟೀಲರು ಇದಕ್ಕೆ ವಿರುದ್ಧವೆಂಬಂತೆ ವಿಪರೀತವಾಗಿ ಸತತವಾಗಿ ಓದಿನ ಜೊತೆಗೆ ಸುತ್ತಲಿನ ಸಮಾಜ ದೇಶದ ಅಭಿವೃದ್ಧಿಯ ಕಾರ್ಯಗಳಲ್ಲಿ ತೊಡಗಿದರು

**ಕಾಲೇಜು ಅಭ್ಯಾಸದಲ್ಲಿ ವಿ.ಎನ್ ಪಾಟೀಲ ರವರ ಪಾತ್ರ**

ಬೀದರಿನಲ್ಲಿ ಪ್ರೌಢಶಾಲಾ ಅಭ್ಯಾಸ ಮುಗಿಸಿದ ನಂತರ ಪಾಟೀಲರು ಹೈದರಾಬಾದಿನ ಚಾದರ ಘಾಟಿ ಕಾಲೇಜಿನಲ್ಲಿ ಅಭ್ಯಾಸ ಮುಂದುವರಿಸಿದರೂ ಭಾರತ ಸ್ವತಂತ್ರವಾಯಿತು. ಹೈದರಾಬಾದ್ ನಿಜಾಮನ ಕಪಿಮುಷ್ಠಿಯಲ್ಲಿ ರಾಜ್ಯವು ನರಳುತ್ತಿತ್ತು. ನಿಜಾಮನ ಕಪಿಮುಷ್ಠಿಯಿಂದ ರಾಜ್ಯವನ್ನು

ಮುಕ್ತಗೊಳಿಸಬೇಕೆಂಬ ಉದ್ದೇಶದಿಂದ ಆರ್ಯ ಸಮಾಜ ಮತ್ತು ಕಾಂಗ್ರೆಸ್ ಪಕ್ಷ ಹೋರಾಟ ನಡೆಸಿದವು, ಕಾಲೇಜಿನ ವಿದ್ಯಾರ್ಥಿಗಳು ಕೂಡ ಈ ಹೋರಾಟದಲ್ಲಿ ಭಾಗವಹಿಸುತ್ತಿದ್ದರು. ವಿ.ಎನ್ ಪಾಟೀಲರು "ಫ್ರೀಡಂ ಕ್ಲಬ್" ಎಂಬ ಒಂದು ಚಳುವಳಿಗಾರರ ಸಂಸ್ಥೆಯ ಸದಸ್ಯರಾದರು, ಆ ಸಂಘದಲ್ಲಿ ನಮ್ಮ ಬೀದರ್ ಜಿಲ್ಲೆಯ ಹೋರಾಟಗಾರರು ಇದ್ದರು ಕಾಲೇಜಿನ ವಿದ್ಯಾರ್ಥಿಗಳು ಕೂಡ ಸದಸ್ಯರಾಗಿದ್ದರು, ಅನೇಕ ಸಲ ಚಳುವಳಿ ಹೂಡಿ ಜೈಲು ಶಿಕ್ಷೆ ಅನುಭವಿಸಿದರು. ಉಸ್ಮಾನಿಯ ವಿಶ್ವವಿದ್ಯಾಲಯ ಮೇಲೆ ತ್ರಿವರ್ಣ ಧ್ವಜ ಹಾರಿಸಿದವರಲ್ಲಿ ವಿನ್ ಪಾಟೀಲರು ಪ್ರಮುಖರಾಗಿದ್ದರು. ಧ್ವಜವೇರಿಸಿದ ವಿದ್ಯಾರ್ಥಿಗಳ ಮೇಲೆ ಸರ್ಕಾರ ಕ್ರಮ ಕೈಗೊಂಡಿತು. ಹಲವರು ವಿದ್ಯಾರ್ಥಿಗಳಿಗೆ ರಾಜದ್ರೋಹಿಗಳೆಂದು ಬಗೆದು ಕಾಲೇಜಿನಿಂದ ತೆಗೆದು ಹಾಕಿದರು ಇಂಥ ವಿದ್ಯಾರ್ಥಿಗಳಿಗೆ ಯಾವ ಕಾಲೇಜಿನಲ್ಲಿಯೂ ಪ್ರವೇಶ ಕೊಡಬಾರದೆಂದು ಪ್ರಮಾಣ ಪತ್ರದಲ್ಲಿ ನಮೂದಿಸಿದ್ದರು, ನಂತರ ಮಹಾರಾಷ್ಟ್ರದ ಮಾರ್ವಾಗರ ಬಿಂಜಾನಿ ಕಾಲೇಜು ಹೈದರಾಬಾದಿನದಿಂದ ಹೊರ ತಳ್ಳಲ್ಪಟ್ಟ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುತ್ತಿತ್ತು, ಈ ಕಾಲೇಜಿನಲ್ಲಿ ವಿ.ಎನ್ ಪಾಟೀಲರು ಮತ್ತು ಇನ್ನಿತರ ಸಹಪಾಠಿಗಳೊಂದಿಗೆ ಬಂದು ಸೇರಿದರು ನಂತರ ಈ ಕಾಲೇಜಿನಲ್ಲಿ ಇಂಟರ್ ಮಿಡಿಯೇಟ್ ಎರಡು ವರ್ಷ ಕೋರ್ಸ್ (ಅಭ್ಯಾಸವನ್ನು) ಮುಗಿಸಿದರು. ನಂತರ ವಿ.ಎನ್ ಪಾಟೀಲರಿಗೆ ಕಾನೂನು ಕಲಿಯಬೇಕೆಂಬ ಹಂಬಲವಾಯಿತು. ಆದ್ದರಿಂದ ಮುಂದೆ ಕಾನೂನು ಅಭ್ಯಾಸಕ್ಕಾಗಿ ಬೆಳಗಾವಿ (ಬೆಳಗಾವಿ)ಯ ಲಿಂಗರಾಜ ಕಾನೂನು ಕಾಲೇಜಿನಲ್ಲಿ ಎರಡು ವರ್ಷ ಅಭ್ಯಾಸ ಮಾಡಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿ ವಕೀಲ ವೃತ್ತಿ ಕೈಕೊಂಡರು.

**ರಜಾಕಾರರ ಉಪಟಳ (ರಜಾಕಾರರ ಹೋರಾಟದಲ್ಲಿ ವಿ.ಎನ್ ಪಾಟೀಲರ ಪಾತ್ರ)**

ಹೈದರಾಬಾದಿನ ಸ್ವಾತಂತ್ರ್ಯ ಹೋರಾಟ ಹಾಗೂ ಪಾಟೀಲರ ವಿದ್ಯಾರ್ಥಿ ಜೀವನ ಏಕಕಾಲದಲ್ಲಿ ಸಂಭವಿಸಿತು. ಭಾರತ ಸ್ವತಂತ್ರವಾದರೂ ಹೈದರಾಬಾದ್ ರಾಜ್ಯದ ಜನರಿಗೆ ಆ ಭಾಗ್ಯ ದೊರೆಯಲಿಲ್ಲ. ಭಾರತ ಸ್ವಾತಂತ್ರ್ಯ ಪಡೆದ 13 ತಿಂಗಳ ನಂತರ ಹೈದರಾಬಾದ್ ಪ್ರಜೆಗಳಿಗೆ ಸ್ವಾತಂತ್ರ್ಯ ದೊರಕಿತು. ಇದಕ್ಕಿಂತ ಮೊದಲು ಹಿಂದುಗಳು ನಾನಾ ತರಹದ ಕಷ್ಟ ಕೋಟಲೆಗಳನ್ನು ಸಹಿಸಬೇಕಾಯಿತು. ಗ್ರಾಮಗಳು ಸುಟ್ಟುಹೋದವು, ಮನೆಗಳು ಲೂಟಿಯಾದವು, ಮಹಿಳೆಯರ ಮೇಲೆ ಅತ್ಯಾಚಾರಗಳು ಅವ್ಯಾಹತವಾಗಿ ನಡೆದವು. ಹೈದರಾಬಾದ್ ನಿಜಾಮನು ದುಷ್ಟ ರಜಾಕಾರರಿಗೆ ಕುಮ್ಮಕ್ಕು ಕೊಟ್ಟನು. ರಜಾಕಾರರ ನಾಯಕ ಕಾಸಿಂ ರಜ್ವಿ ಈ ಹೀನ ಕೃತ್ಯಗಳಿಗೆ ಕಾರಣನಾಗಿದ್ದನು. ಈ ರೀತಿ ಹೀಗೆಯೇ ಮುಂದುವರಿದರೆ ಹಿಂದುಗಳ ಸಾಮೂಹಿಕ ಅತ್ತೆಯಾಗುವ ಸೂಚನೆಗಳು ದೊರೆತವು. ಭಯಬೀತರದ ಹಿಂದೂಗಳು ರಾಜ್ಯದ ನೆರೆ ರಾಜ್ಯಗಳ ಗಡಿ ಪ್ರದೇಶಗಳಿಗೆ ಓಡಿ ಹೋದರು ಈ ಪ್ರದೇಶಗಳು ಭಾರತ ಒಕ್ಕೂಟಕ್ಕೆ ಸೇರಿದವು. ವಿ.ಎನ್ ಪಾಟೀಲರು ಹಾಗೂ ಆ ಊರಿನ 60 ಜನರು ಅಕ್ಕಲಕೋಟೆಗೆ ವಲಸೆ

ಹೋದರು. ಪಾಟೀಲರು ಹೈದರಾಬಾದ್ ರಾಜ್ಯವನ್ನು ಮುಕ್ತಗೊಳಿಸಲು ಸೈನ್ಯದ ತರಬೇತಿ ಪಡೆದರು. ನಿವೃತ್ತ ಸೈನಿಕರಿಂದ ಹೋರಾಟಗಾರರು ತರಬೇತಿ ಹೊಂದಿದರು. ಗಡಿಯಲ್ಲಿ ರಜಾಕಾರರ ಹಾಗೂ ಹೋರಾಟಗಾರರ ನಡುವೆ ಯುದ್ಧಗಳು ನಡೆಯುತ್ತಿದ್ದವು. ವಿಎನ್ ಪಾಟೀಲರು ಆ ಹೋರಾಟದಲ್ಲಿ ಭಾಗಿಯಾಗುತ್ತಿದ್ದರು.

ರಜಾಕಾರರಿಗೆ ಪಾಕಿಸ್ತಾನದ ನೆರವು ಇತ್ತು. ಪಠಾಣರು ರಜಾಕಾರರಿಗೆ ತರಬೇತಿ ಕೊಡುತ್ತಿದ್ದರು, ಹೊರ ರಾಜ್ಯಗಳಿಂದ ಮುಸಲ್ಮಾನರನ್ನು ಹೈದರಾಬಾದಿಗೆ ಬರಮಾಡಿಕೊಂಡು, ಮುಸಲ್ಮಾನರ ಜನಸಂಖ್ಯೆ ಹೆಚ್ಚಿಸಬೇಕು ಎಂಬ ದೂರ ದೃಷ್ಟಿಯಿಂದ ಅವರನ್ನು ಬರಮಾಡಿಕೊಳ್ಳುತ್ತಿದ್ದರು, ಮತ್ತು ಹಿಂದುಗಳನ್ನು ಸಂಹರಿಸಿ ಅವರನ್ನು ದೇಶ ಭ್ರಷ್ಟರನ್ನಾಗಿ ಮಾಡುವುದೇ ಅವರ ಗುರಿಯಾಗಿತ್ತು. ಇದನ್ನು ಅರಿತ ಭಾರತದ ಉಪ ಪ್ರಧಾನಿಗಳಾದ ಸರ್ದಾರ್ ವಲ್ಲಭಾಯಿ ಪಟೇಲರು ಅರಾಜಕತೆಯನ್ನು ಸಹಿಸದೆ 13–09–1948ಕ್ಕೆ ಪೊಲೀಸ್ ಕಾರ್ಯಾಚರಣೆಗೆ ಅನುಮತಿ ಕೊಟ್ಟರು. ಭಾರತ ಸರ್ಕಾರದ ಸೇನೆಯು ರಜಾಖಾರರಿಗೆ ಮಣ್ಣುಮುಕ್ಕಿಸಿದರು, ಹೈದರಾಬಾದ್ ರಾಜ್ಯವನ್ನು 17–09–1948 ರಂದು ಭಾರತದ ಒಕ್ಕೂಟದಲ್ಲಿ ಸೇರಿತು.

ಇದೇ ಸಮಯದಲ್ಲಿ ಗೋವರಿ ವಿಮೋಚನೆಯ ಸತ್ಯಾಗ್ರಹದಲ್ಲಿ ಭಾಗವಹಿಸಲು ಬಸವರಾಜ ಹುದುಗಿಯವರು ಸಕ್ರಿಯವಾಗಿ ಹೋರಾಟ ನಡೆಸುತ್ತಿರುವಾಗ ಪೋರ್ಚುಗೀಸರ ಗುಂಡಿಗೆ ಆಹುತಿಯಾದರೂ. ಇವರ ಪಾರ್ಥಿವ ಶರೀರವನ್ನು ಅಕ್ಕಲಕೋಟೆಗೆ ತರಲು ಅಸಾಧ್ಯವಾಗಿತ್ತು, ವಿ.ಎನ್ ಪಾಟೀಲರು ತಮ್ಮ ಸಂಗಡಿಗರೊಂದಿಗೆ ಗೋವಾಕ್ಕೆ ಹೋಗಿ ಹಲ್ಲಿನ ಸರ್ಕಾರಕ್ಕೆ ಬಸವರಾಜ ಹುಡುಗಿಯವರು ಕ್ರೈಸ್ತ ಧರ್ಮಕ್ಕೆ ಸೇರಿದವರೆಂದು ಮನವರಿಕೆ ಮಾಡಿಕೊಟ್ಟರು, ಕ್ರೈಸ್ತರೆಂದು ತಿಳಿದ ಅಲ್ಲಿಯ ಕ್ರೈಸ್ತ ಆಡಳಿತಗಾರರು ಕಳೇಬರವನ್ನು ಒಯ್ಯಲು ಅನುಮತಿಯನ್ನಿದ್ದರೂ.ಕ್ರೈಸ್ತ ಧರ್ಮದ ಪದ್ಧತಿಯಂತೆ ಶವವನ್ನು ಪೆಟ್ಟಿಗೆಯಲ್ಲಿಟ್ಟು ತೆಗೆದುಕೊಂಡು ಬಂದು, ಅಕ್ಕಲಕೋಟೆ ರಾಜ ಮನೆತನ ರುದ್ರ ಭೂಮಿಯಲ್ಲಿ ಸಮಾಧಿ ಮಾಡಲಾಯಿತು. ಈ ರೀತಿ ವಿಶ್ವನಾಥ ಪಾಟೀಲರು ಎಂತಹ ದೂರಲೋಚನೆಯವರಿದ್ದರೆಂದು ತಿಳಿದು ಬರುತ್ತದೆ. ಹೈದರಾಬಾದ್ ವಿಮೋಚನೆ ನಂತರ ಮರಳಿ ಮನೆಗೆ ಬಂದರು.

**ಅಸ್ಪೃಶ್ಯೋದ್ಧಾರ–ಕ್ಕೆ ನಿವಾರಣೆಯಲ್ಲಿ ಬಿ ಎನ್ ಪಾಟೀಲರ ಪಾತ್ರ**

1952ರಲ್ಲಿ ಬಿ ಎನ್ ಪಾಟೀಲರು ಐನೂಲಿಗೆ ಆಗಮಿಸಿದಾಗ ರಾಮದೇವರಗುಡಿಯಲ್ಲಿ ಸಭೆಯನ್ನು ಏರ್ಪಡಿಸಿದರು. ಸಾಕಷ್ಟು ಜನರು ಈ ಸಭೆಯಲ್ಲಿ ಭಾಗವಹಿಸಿದ್ದರು ಈ ಸಭೆಯ

ಅಧ್ಯಕ್ಷತೆಯನ್ನು ಭೇಮಖೇಡದ ಉರಿಲಿಂಗಪೆದ್ದಿ ಮಠದ ಸಿ.ಜೆ ಸ್ವಾಮಿಯವರು ವಹಿಸಿದ್ದರು ಹರಿಜನರು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು ಪಾಟೀಲರು ಜನರನ್ನುದ್ದೇಶಿಸಿ ಹೀಗೆ ಹೇಳಿದರು. "ಮನುಷ್ಯ ಕುಲವು ಒಂದೇ ಆಗಿದೆ, ಇವರಲ್ಲಿ ಜಾತಿಭೇದವಿಲ್ಲ, ಅಸ್ಪ್ರಶ್ಯತೆ ಎಂಬುದು ಮೂರ್ಖರ ಕಲ್ಪನೆಯಾಗಿದೆ ಸದಾಚಾರಿಯೇ ಉತ್ಕೃಷ್ಟ ಕುಲದವ, ಭವಿಯೊಂದು ಕುಲ, ಭಕ್ತವೊಂದು ಕುಲ, ಕಲ್ಲು ಮಣ್ಣು ಹೊತ್ತು ಗುಡಿ ಗೋಪುರಗಳನ್ನು ಹರಿಜನರು ಕಟ್ಟುತ್ತಾರೆ. ಆಗ ಅವರ ಜಾತಿಯನ್ನು ನೋಡುವುದಿಲ್ಲ! ದೇವಾಲಯ ತಯಾರಾದ ನಂತರ ಅವರಿಗೆ ಪ್ರವೇಶ ಕೊಡದೆ ಇರುವುದು ಯಾವ ನ್ಯಾಯ? ನಮ್ಮ ಮನಸ್ಸಿನಿಂದ ಇಂತಹ ಹೀನ ವಿಚಾರಗಳನ್ನು ತೆಗೆಯಬೇಕು, ಅಸ್ಪ್ರಶ್ಯತೆ ಆಚರಿಸುವವರು ಬಸವಣ್ಣನವರ ಮತ್ತು ಶರಣರ ಅನುಯಾಯಿಗಳಾಗುವುದಿಲ್ಲ ಅವರಿಗೆ ದ್ರೋಹ ಮಾಡಿದಂತಾಗುವುದು, ಅವರು ನಮ್ಮವರೇಂದು ಅಪ್ಪಿಕೊಳ್ಳಬೇಕು, ಇಷ್ಟು ದಿನ ತಿಳಿದು ತಿಳಿಯದೆಯೋ ಅಸ್ಪ್ರಶ್ಯತೆ ಆಚರಿಸಿದ್ದೀರಿ, ಇನ್ನು ಮುಂದೆ ನಿಮ್ಮ ತಪ್ಪು ತಿದ್ದಿಕೊಳ್ಳಿರೆಂದು ಹೇಳಿದರು. ಅವರ ಅಂತಃಕರಣದ ಮಾತುಗಳು ಜನರ ಮನಸ್ಸನ್ನು ತಟ್ಟಿದವು ಹರಿಜನರ ದೇವಾಲಯದ ಪ್ರವೇಶಕ್ಕೆ ಯಾರು ವಿರೋಧಿಸಲಿಲ್ಲ.

**ವಾಚನಾಲಯಗಳ ಸ್ಥಾಪನೆಯಲ್ಲಿ ವಿ.ಎನ್ ಪಾಟೀಲರು**

ವಿ.ಎನ್ ಪಾಟೀಲರು ವಿದ್ಯಾರ್ಥಿಯಾಗಿದ್ದಾಗಲೇ ಅಭ್ಯಾಸದೊಂದಿಗೆ ಕನ್ನಡ ಪ್ರಚಾರ ವಾಚನಾಲಯಗಳ ಸ್ಥಾಪನೆ, ಕನ್ನಡ ಶಾಲೆ, ಪ್ರೌಢಶಾಲೆಗಳ ಪ್ರಾರಂಭಗೊಳಿಸಲು ಶ್ರಮಿಸಿದರು. ಯುವಕ ಸಂಘಗಳನ್ನು ಸ್ಥಾಪಿಸಿದರು. ಇದರಿಂದ ಜನರಲ್ಲಿ ಕನ್ನಡದ ಬಗ್ಗೆ ಜಾಗೃತಿ ಉಂಟಾಯಿತು, ಶಿಕ್ಷಕರಾದ ವೀರ ಸಂಗಪ್ಪ ಮಣಿಗೆಯವರು ಪಾಟೀಲರೊಡನೆ ಸಾಮಾಜಿಕ ಕಾರ್ಯಗಳಲ್ಲಿ ದುಡಿದವರಾಗಿದ್ದರು, ಬೀದರಿನಲ್ಲಿ ಕರ್ನಾಟಕದ ವಾಚನಾಲಯವನ್ನು ಸ್ಥಾಪಿಸುವವರಲ್ಲಿ ಮೊದಲಿಗರೆಂದು ಹೇಳಬೇಕು. ಬೀದರ್ ನಗರದ ಪ್ರತಿಯೊಬ್ಬ ಶಿಕ್ಷಕರು ಈ ವಾಚನಾಲಯದ ಸದಸ್ಯರಾಗಿದ್ದರು, ಪ್ರತಿ ತಿಂಗಳು ಎರಡಾಣೆ ಶುಲ್ಕ ಕೊಡಬೇಕಾಗಿತ್ತು. ಈ ವಾಚನಾಲಯವು 1952ರಲ್ಲಿ ಪ್ರಾರಂಭವಾಯಿತು. ಕರ್ನಾಟಕದಲ್ಲಿ ಪ್ರಕಟವಾಗಿರುವ ದಿನಪತ್ರಿಕೆಗಳು, ವಾರಪತ್ರಿಕೆಗಳು ಬರುತ್ತಿದ್ದವು, ಸರ್ಕಾರದ ಸಹಾಯದಿಂದ ಉತ್ತಮ ಗ್ರಂಥಗಳು ತರಿಸಲಾಗುತ್ತಿತ್ತು. ಶಾಲೆಬಿಟ್ಟ ನಂತರ ವಿದ್ಯಾರ್ಥಿಗಳು, ಯುವಕರು ಪತ್ರಿಕೆಗಳನ್ನು ಓದಲು ಧಾವಿಸಿ ಬರುತ್ತಿದ್ದರು. ಆಗಾಗ ಉಪನ್ಯಾಸಗಳು ಏರ್ಪಡಿಸುತ್ತಿದ್ದರು. ಈ ವಾಚನಾಲಯದಿಂದ ವಿದ್ಯಾರ್ಥಿಗಳಿಗೆ ಬಹಳಷ್ಟು ಪ್ರೇರಣೆ ದೊರೆಯಿತು. ನಂತರ ವಿ.ಎನ್ ಪಾಟೀಲರು ತಮ್ಮ ಜನ್ಮಸ್ಥಳವಾದ ಮೀನ ಕೇರಿಯಲ್ಲಿ ತಮ್ಮ ಚಿಕ್ಕಪ್ಪಂದಿರ ಸಹಾಯದಿಂದ ವಾಚನಾಲಯವನ್ನು ಸ್ಥಾಪಿಸಿದರು ಈ ಚಿಕ್ಕ ಹಳ್ಳಿಯ ವಾಚನಾಲಯದಲ್ಲಿ ಕರ್ನಾಟಕದ ಶ್ರೇಷ್ಠ ಲೇಖಕರ ಪುಸ್ತಕಗಳು ದೊರಕುತ್ತಿದ್ದವು.

ಜನರಿಗೆ ಜ್ಞಾನ ಸಂಪಾದನೆ ಮಾಡುವ ಅವಕಾಶವನ್ನು ಕಲ್ಪಿಸಿಕೊಟ್ಟರು ಈ ರೀತಿಯಾಗಿ ಜ್ಞಾನ ಪ್ರಸಾರದ ಕೆಲಸ ಮಾಡಿ ಜಿಲ್ಲೆಯಲ್ಲಿ (ಬೀದರ ಜಿಲ್ಲೆಯಲ್ಲಿ) ಹಾಗೂ ಗಡಿ ಭಾಗಗಳಲ್ಲಿ ಕನ್ನಡ ಅಭಿಮಾನವನ್ನು ಜಾಗೃತಗೊಳಿಸಿದವರಲ್ಲಿ ವಿ.ಎನ್ ಪಾಟೀಲರೇ ಮೊದಲಿಗರು ಹಾಗೂ ಅಗ್ರಗಣ್ಯರು.

**ಧನ್ಯಶ್ರೀಯಲ್ಲಿ ಕನ್ನಡ ಅಧಿವೇಶನದಲ್ಲಿ ವಿಎನ್ ಪಾಟೀಲರ ಪಾತ್ರ**

ರಾಜ್ಯ ಪುನರ್ ಸಂಘಟನೆಯಾದ ನಂತರ ಕನ್ನಡ ಮಾತನಾಡುವ ಕೆಲ ಪ್ರದೇಶಗಳು ಆಂಧ್ರಕ್ಕೆ ಸೇರಿಸಲಾಯಿತು. ಧನ್ಯ ಶ್ರೀ ಹಳ್ಳಿಯು ಕನ್ನಡ ಮಾತನಾಡುವ ಜನರಿಂದ ಕೂಡಿದ್ದರೂ ಆಂಧ್ರಕ್ಕೆ ಒಳಪಟ್ಟು ಜಹಿರಾಬಾದ್ ತಾಲೂಕಿಗೆ ಸೇರಿಸಲಾಯಿತು. ಇಂತಹ ಸಂದಿಗ್ಧ ಸಮಯದಲ್ಲಿ ವಿ.ಎನ್ ಪಾಟೀಲರು ಧನಶ್ರೀಯಲ್ಲಿ ಕನ್ನಡಿಗರ ಅಧಿವೇಶವನ್ನು ಏರ್ಪಡಿಸಿದರು. ಚಿತ್ರದುರ್ಗದ ಸಂಸತ್ ಸದಸ್ಯರಾದ ಸಿ.ಆರ್ ಬಸಪ್ಪನವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು, ಗಿರಿಯಪ್ಪ ಪಾಟೀಲರು ಆ ಅಧಿವೇಶನದ ಅಧ್ಯಕ್ಷರಾಗಿದ್ದರು, ಅನೇಕ ಕನ್ನಡ ಅಭಿಮಾನಿಗಳು ಹಾಗೂ ಅನೇಕ ಮುಖಂಡರು ಆಗಮಿಸಿದ್ದರು. ಧನಶ್ರೀ ಗ್ರಾಮದ ಬಸವರಾಜ ಸಿಂದೋಲರವರು ವ್ಯವಸ್ಥಾಪಕರಾಗಿದ್ದರು.

ಈ ಅಧಿವೇಶನದಲ್ಲಿ ಕೈಗೊಂಡ ನಿರ್ಣಯಗಳೆಂದರೆ

- ಧನಶ್ರೀ ಮತ್ತು ಮಾಡಕಿ ಗ್ರಾಮಗಳಲ್ಲಿ ಕನ್ನಡ ಮಾತನಾಡುವವರ ಸಂಖ್ಯೆ ಹೆಚ್ಚಿದೆ.
- ಆಂಧ್ರದಲ್ಲಿ ಸೇರಿದ ಈ ಎರಡು ಗ್ರಾಮಗಳನ್ನು ಕರ್ನಾಟಕದಲ್ಲಿ ಸೇರಿಸಬೇಕು.
- ಇದರಂತೆ ಬರೂರ ಮತ್ತು ಧರಮಪೂರ ತೆಲುಗು ಮಾತನಾಡುವ ಗ್ರಾಮಗಳು ಕರ್ನಾಟಕದಲ್ಲಿ ಸೇರಿವೆ. ಈ ಎರಡು ಹಳ್ಳಿಗಳನ್ನು ಆಂಧ್ರಕ್ಕೆ ಸೇರಿಸಬೇಕು

ಈ ರೀತಿ ಕೊಟ್ಟು ತೆಗೆದುಕೊಳ್ಳುವ ನ್ಯಾಯಯುತ ಬೇಡಿಕೆಯನ್ನು ಮಂಡಿಸಲಾಯಿತು. ಆಗ ಆಂಧ್ರಪ್ರದೇಶದ ಮುಖ್ಯಮಂತ್ರಿ ಬಿ ರಾಮಕೃಷ್ಣರಾವ್ ಅಗಿದ್ದರು. ಎಲ್ಲವೂ ನಿಗದಿಯಂತೆ ಆಗುವುದರಲ್ಲಿ, ಆದರೆ ನಾರಾಯಣಕೇಡದ ಬಾಪುರಾವ್ ದೇಶಪಾಂಡೆ ಅಡ್ಡಗಾಲು ಹಾಕಿದರು. ಹಾಗಾಗಿ ಅದು ಅಷ್ಟಕ್ಕೆ ನಿಂತುಬಿಟ್ಟಿತು. ಕನ್ನಡ ಖ್ಯಾತ ಕವಿ ಡಾ. ಮಣಿಕರಾದ ಧನಶ್ರೀಯವರು ಅದೇ ಊರಿನವರಾಗಿದ್ದರು. ವಿ.ಎನ್ ಪಾಟೀಲರ ಸತತ ಹೋರಾಟ ಅವರ ಪ್ರಯತ್ನದಿಂದ ಆಂಧ್ರಕ್ಕೆ ಸೇರಿದ ಭೇಮಳಖೇಡ ಮತ್ತು ನಿರ್ಣಾ ಹಾಗೂ ಆ ಸರ್ಕಲ್ ಗೆ ಸೇರಿದ ಎಲ್ಲಾ ಹಳ್ಳಿಗಳು ಕರ್ನಾಟಕಕ್ಕೆ ಸೇರಿದವು ಈ ಹಿನ್ನಲೆಯಲ್ಲಿ ಭೇಮಳಖೇಡ ಹಾಗೂ ನಿರ್ಣಾ ಸರ್ಕಲ್‌ನ ಕನ್ನಡಿಗರು ವಿ.ಎನ್ ಪಾಟೀಲರಿಗೆ ಚಿರಋಣಿಯಾಗಿರಬೇಕು.

**ಕಮನಿಸ್ಟ್ ಪಕ್ಷದಲ್ಲಿ ಪ್ರವೇಶ**

ಕರ್ನಾಟಕದ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷರು ಬಿ.ವಿ ಕಕ್ಕಿಲಾಯರವರಾಗಿದ್ದರು. ವಿ.ಎನ್ ಪಾಟೀಲರು 1957ರಲ್ಲಿ ಕಮ್ಯುನಿಸ್ಟ್ ಪಕ್ಷ ಸೇರಿದರು ಬೀದರ್ ಜಿಲ್ಲೆಯಲ್ಲಿ ಇವರ ಸಂಗಾತಿಗಳೆಂದರೆ ರಂಗನಾಥರಾವ್, ಸಾಯಿಗಾವಂಕರ್, ಶಂಕರ್ ರಾವ್ ಘಂಟಿ, ಶಂಕರ್ ರಾವ್ ದೇಶಪಾಂಡೆ ಹಳ್ಳಿಖೇಡ, ಹಾವಗಿ ರಾವ್ ತಮ್ಮಸಂಗೆ ದಾಡಗಿ, ಕಲ್ಯಾಣರಾವ್ ಪಾಟೀಲ ತಲವಾಡ ಮುಂತಾದವರು ಅನೇಕ ಹಳ್ಳಿಗಳಲ್ಲಿ ಅವರ ಪಕ್ಷದ ಸದಸ್ಯರಾದರು. ವಿ.ಎನ್ ಪಾಟೀಲರು ಬೀದರ ಜಿಲ್ಲೆಯ ಭಾರತೀಯ ಕಮಿನಿಸ್ಟ್ ಪಾರ್ಟಿಯ ಕಾರ್ಯದರ್ಶಿಗಳಾಗಿದ್ದರು.

**ಕಮ್ಯುನಿಸ್ಟ್ ಸಿದ್ದಾಂತ**

ಕಮ್ಯುನಿಸ್ಟ್ ಸಿದ್ದಾಂತವು ಕಾರ್ಲ್‌ಮಾರ್ಕ್ಸ್ ಸಿದ್ದಾಂತವಾಗಿದೆ, ಸಮಾಜದಲ್ಲಿರುವ ಆರ್ಥಿಕ ಅಸಮಾನತೆಯನ್ನು ಸರಿಪಡಿಸುವ ತತ್ವಗಳನ್ನು ಬರೆದಿಟ್ಟಿದ್ದಾನೆ. ಈತನ ಸ್ನೇಹಿತನಾದ ಏಂಜಲ್ ಮಾರ್ಕ್ಸ್‌ನ ತತ್ವಗಳನ್ನು ಪ್ರಕಟಿಸುವ ಜವಾಬ್ದಾರಿ ಹೊತ್ತಿದ್ದನು. ಈ ತತ್ವವು ರಷ್ಯಾ ಮತ್ತು ಚೈನಾ ದೇಶಗಳಲ್ಲಿ ಹೆಚ್ಚು ಪ್ರಚಾರಗೊಂಡಿತು ಲೆನಿನ್ ಮತ್ತು ಸ್ಟಾಲಿನ್ ರಷ್ಯಾ ದೇಶದಲ್ಲಿ ಈ ಸಿದ್ಧಾಂತವನ್ನು ರಾಜ್ಯದ ಆಡಳಿತದಲ್ಲಿ ತಂದರು. ನಮ್ಮ ದೇಶದಲ್ಲಿ ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ಕಮ್ಯುನಿಸ್ಟ್ ಸರ್ಕಾರ ರಚನೆಗೊಂಡಿತು.

"ಶಕ್ತಿ ಇದ್ದಷ್ಟು ದುಡಿ, ಅವಶ್ಯಕತೆ ಇದ್ದಷ್ಟು ಪಡಿ" ಇದು ಕೂಡ ಶರಣ ಸಿದ್ದಾಂತವೇ ಆಗಿದೆ. ಬಂಡವಾಳ ಶಾಹಿಗಳ ಹಿಡಿತದಲ್ಲಿರುವ ದುಡಿಯುವ ಕಾರ್ಯಕರ್ತರೇ ಒಡೆಯರಾಗಬೇಕೆಂಬ ಸಿದ್ದಾಂತ ಕಮ್ಯುನಿಸ್ಟ್ ಪಕ್ಷದ್ದಾಗಿದೆ, ಪಾಟೀಲರು ಕಮಿನಿಸ್ಟ್ ಪಕ್ಷದ ನಾಯಕರಾಗಿ ಹಗಲಿರುಳು ಪಾರ್ಟಿಗಾಗಿ ದುಡಿದರು. ಅವರಿಗೆ ಈ ಸಿದ್ಧಾಂತದ ಮೇಲೆ ಅಗಾಧವಾದ ನಿಷ್ಠೆ ಇತ್ತು. ಯಾವುದೇ ಸಂದರ್ಭದಲ್ಲಿ ಪಕ್ಷ ತೊರೆಯಲಿಲ್ಲ, ಕೊಂಬೆಯಿಂದ ಕೊಂಬೆಗೆ ಹಾರುವ ಮಂಗನಂತೆ ಪಕ್ಷಾಂತರ ಮಾಡುವ ರಾಜಕಾರಣಿ ಇವರಾಗಿರಲಿಲ್ಲ. ಕಾಂಗ್ರೆಸ್ ಪಕ್ಷದಲ್ಲಿ ಸೇರಿಸುವ ಹಾಮಿಷ ಬಂದರು ಅದನ್ನು ವಿ.ಎನ್ ಪಾಟೀಲರು ಬದಿಗೊತ್ತಿ ತಮ್ಮ ಪಕ್ಷದ ನಿಷ್ಠೆ ಬಿಡಲಿಲ್ಲ.

ವಿ.ಎನ್ ಪಾಟೀಲರು ಹೈಕೋರ್ಟಿನ ವಕೀಲರಾಗಿದ್ದರು. ನಿಸ್ವಾರ್ಥದಿಂದ ಜನಸೇವೆ ಮಾಡಿದವರಾಗಿದ್ದರು. ಕಮಿನಿಸ್ಟ್ ಪಕ್ಷದ ಮುಖಂಡರಾಗಿದ್ದರು ಬೀದರ್‌ನ ಭಾಗದಲ್ಲಿ ಕಮನಿಸ್ಟ್ ಪಕ್ಷದ ಪ್ರಚಾರವಿರಲಿಲ್ಲ ಕಾಂಗ್ರೆಸ್ ಪಕ್ಷವೇ ಹೆಚ್ಚು ಪ್ರಚಾರದಲ್ಲಿತ್ತು ಕಾಂಗ್ರೆಸ್ ಪಕ್ಷದಲ್ಲಿದ್ದರೆ ಅವರು ರಾಷ್ಟ್ರಮಟ್ಟದ ಮುಖಂಡರಾಗುತ್ತಿದ್ದರು ಕಲ್ಕತ್ತದಲ್ಲಿ ಕಮಿನಿಸ್ಟ್ ಪಕ್ಷ ಪ್ರಚಾರದಲ್ಲಿತ್ತು ಕಲ್ಕತ್ತದಲ್ಲಿ ಜನ್ಮವೆತ್ತಿದ್ದರೆ

ದೇಶದಲ್ಲಿಯೇ ಪ್ರಖ್ಯಾತರಾಗುತ್ತಿದ್ದರು. ಬಹಳ ಪ್ರಿನ್ಸಿಫಲ್ ಮನುಷ್ಯನಾಗಿದ್ದು ಯಾರ ಹತ್ತಿರ ಏನನ್ನು ತೆಗೆದುಕೊಳ್ಳದೆ ಕೆಲಸವನ್ನು ಮಾಡುತ್ತಿದ್ದ ನಿಸ್ವಾರ್ಥ ಧುರೀಣ ಕಮಿನಿಸ್ಟ್ ರಾಗಿದ್ದರು ಸ್ವತಂತ್ರ ವಿಚಾರಧಾರರಾಗಿದ್ದರು.

ಇವರ ಮನುಷ್ಯತ್ವದ ಬಗ್ಗೆ ಮಹದೇವಪ್ಪ ಮೀಸೆಯವರು ಈ ರೀತಿಯಾಗಿ ಹೇಳಿದ್ದಾರೆ. ಮಹದೇವಪ್ಪನವರು ವಿ ಎನ್ ಪಾಟೀಲರು ಒಂದು ಸಲ ಆಕಸ್ಮಿಕವಾಗಿ ಕಾಲು ಪೆಟ್ಟು ತಿಂದು ವಿಶ್ರಾಂತಿ ಪಡೆಯುತ್ತಿದ್ದಾಗ ಅವರನ್ನು ಭೇಟಿ ಮಾಡಲು ಮೀನಕೆರೆಗೆ ಹೋಗಿ ಯೋಗ ಕ್ಷೇಮವನ್ನು ವಿಚಾರಿಸಿದ್ದರು. ವಿ.ಎನ್ ಪಾಟೀಲರು ತಮ್ಮ ಕಾಲು ಮುರಿದುದ್ದಕ್ಕಾಗಿ ಬಹಳ ನೊಂದುಕೊಂಡಿದ್ದರು. ಬಹಳ ಕೆಲಸ ಮಾಡಬೇಕೆಂದಿದ್ದೆ ಹೀಗಾಯಿತು ಎಂದು ದುಃಖ ವ್ಯಕ್ತಪಡಿಸಿದರು.

**ಕಮ್ಯುನಿಸ್ಟ್ ತತ್ವದ ಅಪೂರ್ವ ಶಾಸಕ**

ವಿ.ಎನ್ ಪಾಟೀಲರು ಜನರ ಹತ್ತಿರ ಹೋಗಿ ಅವರ ಸುಖ ದುಃಖಗಳನ್ನು ವಿಚಾರಿಸುತ್ತಿದ್ದರು, ತೊಂದರೆಗಳನ್ನು ಪರಿಹರಿಸುತ್ತಿದ್ದರು, ಬಡವರ ಬಗ್ಗೆ ಶೋಷಿತರ ಬಗ್ಗೆ ಸದಾ ಕಾಳಜಿಯನ್ನು ಹೊಂದಿದವರಾಗಿದ್ದರು. ಮಾರ್ಕ್ಸ್ ವಾದವನ್ನು ಚೆನ್ನಾಗಿ ಮತ್ತು ಆಳವಾಗಿ ಅಭ್ಯಾಸ ಮಾಡಿದವರಾಗಿದ್ದರು. ಸೌಮ್ಯವಾದದ ಬಗ್ಗೆ ಅವರಿಗೆ ವಿಶ್ವಾಸವಿತ್ತು. ಮಡದಿ ಮಕ್ಕಳ ಬಗ್ಗೆ ಹೆಚ್ಚು ಚಿಂತಿಸುತ್ತಿರಲಿಲ್ಲ ಎರಡು ಸಲ ಚುನಾವಣೆಯಲ್ಲಿ ಸೋತು ಎರಡು ಸಲ ಗೆದ್ದರು. ಮತ್ತೊಂದು ಸಲ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ ಸ್ಪರ್ಧಿಸಿದ್ದರು. ಬಹು ಸಂಖ್ಯಾತರು ಕಾಂಗ್ರೆಸ್ ಪಕ್ಷದವರೇ ಇದ್ದ ಕಾರಣ ಕಾಂಗ್ರೆಸ್ಸಿನ ಸಿದ್ದಪ್ಪ ಬೇಳಗಿಯವರು ಗೆದ್ದರು. ಮೊಟ್ಟ ಮೊದಲ ಬಾರಿಗೆ ಬೀದರ್ ಜಿಲ್ಲೆಯಿಂದ ಕಮಿನಿಸ್ಟ್ ಪಕ್ಷದಿಂದ ಆಯ್ಕೆಯಾದವರೆಂದರೆ ಒಬ್ಬರೇ ಒಬ್ಬರು ವಿ.ಎನ್ ಪಾಟೀಲರಾಗಿದ್ದರು. ಅವರ ನಂತರ ಕಮ್ಯುನಿಸ್ಟ್ ಪಕ್ಷದಿಂದ ಯಾರು ಇಲ್ಲಿಯವರೆಗೂ ಆರಿಸಿ ಬಂದಿಲ್ಲ, ವಿ.ಎನ್ ಪಾಟೀಲರವರೇ ಕಮ್ಯುನಿಸ್ಟ್ ಪಕ್ಷದ ಮೊದಲನೆಯ ಮತ್ತು ಕೊನೆಯ ಅಪೂರ್ವ ಶಾಸಕರೆಂದು ಹೇಳಬಹುದು. ಒಂದು ದುಡ್ಡಿನಷ್ಟು ಕೂಡ ಭ್ರಷ್ಟಾಚಾರ ಮಾಡಲಿಲ್ಲ ಕಮಿನಿಸ್ಟ್ ಮೂವ್‌ಮೆಂಟ್ ಅವರಿಂದಲೇ ಜಿಲ್ಲೆಯಲ್ಲಿ ಪ್ರಾರಂಭವಾಯಿತು.

ವಿ.ಎನ್ ಪಾಟೀಲ್ ಅವರ ಮಾತುಗಳು ಜನರ ಮೇಲೆ ಪ್ರಭಾವ ಬೀರಿದ್ದವು ಅವರಿಂದ ಇನ್ನೂ ಹೆಚ್ಚಿನ ಲಾಭ ಜನರಿಗೆ ಆಗಬಹುದಾಗಿತ್ತು, ಮೊದಲನೆಯ ಸಲ ಚುನಾವಣೆಗೆ ನಿಂತಾಗ ಕಾಲು ಮುರಿಯಿತು ಇದರಿಂದ ಹೆಚ್ಚಿನ ಚಳುವಳಿ ಅವರಿಂದ ನಡೆಯಲಿಲ್ಲ. ಪಾಟೀಲರೊಂದಿಗೆ ಅವರ ಕಾಮ್ರೇಡಗಳಾದ ರಂಗನಾಥರಾವ್ ಸಾಯಗಾಂವಕರ್ ಹಾಗೂ ಶಂಕರರಾವ್ ಘಂಟಿ ಅವರುಗಳು ಹೋರಾಟವನ್ನು ನಡಿಸಿ ಕಮ್ಯುನಿಸ್ಟ್ ಚಳುವಳಿಯು ನಡೆಯಲು ಸಹಾಯಕರಾದರು.

**ರಷ್ಯಾ ಪ್ರವಾಸ**

ಕಮ್ಯುನಿಸ್ಟ್ ಪಕ್ಷಕ್ಕೆ ಪಾಟೀಲರು ಸಲ್ಲಿಸಿದ ಸೇವೆಯನ್ನು ಮನಗಂಡು ರಷ್ಯಾ ದೇಶದ ಇಂಡೋ–ರಷ್ಯನ್ ಕಲ್ಚರ್ ಸೊಸೈಟಿಯವರು ಇವರನ್ನು ರಷ್ಯಾ ದೇಶಕ್ಕೆ ಆಮಂತ್ರಿಸಿದರು. ಸುಮಾರು 15 ದಿವಸ ರಷ್ಯಾ ದೇಶದ ಪ್ರಮುಖ ನಗರಗಳನ್ನು ಸಂದರ್ಶಿಸಿದರು ಅಲ್ಲಿಯ ಸರ್ಕಾರ ಮಾಡಿದ ಪ್ರಗತಿಪರ ಕಾರ್ಯಗಳನ್ನು ಮೆಚ್ಚಿದರು, ಭಾರತ ಮತ್ತು ರಷ್ಯಾ ದೇಶದಲ್ಲಿರುವ ಮಹಾದಂತರವನ್ನು ನೋಡಿದರು. ಭಾರತದಲ್ಲಿಯೂ ರಷ್ಯಾ ದೇಶದಂತೆ ಬದಲಾವಣೆ ತರಬೇಕೆಂದು ಪಾಟೀಲರು ಇಚ್ಛಿಸಿದರು, ನಂತರ ರಷ್ಯಾ ಮತ್ತು ಭಾರತದ ಬಾಂಧವ್ಯದ ಬಗ್ಗೆ ಮೆಚ್ಚಿಕೊಂಡಿದ್ದರು, ಇವರ ಜೊತೆಯಲ್ಲಿ ರಷ್ಯಾಕ್ಕೆ ಹೋದ ವ್ಯಕ್ತಿಗಳೆಂದರೆ ರಂಗನಾಥರಾವ್ ಸಾಯಗಾವಂಕರ್ ಹಾಗೂ ಬೀದರ್ ಡಿ.ಸಿ.ಸಿ ಬ್ಯಾಂಕ್ ಮ್ಯಾನೇಜರ್ ಬಿಎಸ್ ಕುದುರೆಯವರು.

**ದಲಿತರ ಬಡವರ ಧ್ವನಿಯಾಗಿ ಪಾಟೀಲರ ಪಾತ್ರ**

ಪಾಟೀಲರು ಬಡವರ ದೀನದಲಿತರ ಬಗ್ಗೆ ಅವರ ಸಂಕಟಗಳ ನಿವಾರಣೆಗಾಗಿ ಬಹಳ ಶ್ರಮ ಪಟ್ಟಿದ್ದಾರೆ ಸರ್ಕಾರಿ ಭೂಮಿಯನ್ನು 1968ರಲ್ಲಿ ಬಡವರಿಗೆ ಕಬ್ಜಾ ಮಾಡಿಸಿಕೊಟ್ಟರು. ಬಸವಕಲ್ಯಾಣ ಬೀದರ ಮತ್ತು ಹುಮನಬಾದ್ ತಾಲೂಕುಗಳಲ್ಲಿಯೂ ಸರ್ಕಾರಿ ಭೂಮಿ ಸಾವಿರಾರು ಎಕರೆ ಸಾಗುವಳಿ ಮಾಡದೆ ಖಾಲಿ ಉಳಿದಿತ್ತು, ಬಡವರಿಗೆ ಸಾವಿರಾರು ಎಕರೆ ಭೂಮಿಗಳನ್ನು ಹಂಚಿದ್ದು ಇವರ ಸಾಧನೆಗೆ ಹಿಡಿದ ಕನ್ನಡಿಯಾಗಿದೆ. ತಮ್ಮ ಜನ್ಮ ಭೂಮಿಯಾದ ಮೀನ ಕೇರಿಯ ಹರಿ ಜನರಿಗೆ ಸರ್ಕಾರಿ ಜಮೀನನ್ನು ದೊರಕಿಸಿಕೊಟ್ಟು ಅವರ ಬದುಕನ್ನು ಬೆಳಗಿಸಿದರು ಈ ಕಾರ್ಯದಲ್ಲಿ ಅವರಿಗೆ ಸಹಕರಿಸಿದವರೆಂದರೆ ರಂಗನಾಥರಾವ್ ಸಾಯಿಗಾವಂಕರ್.

ಸಂಗ್ರಾಮ ತಂದೆ ಪ್ರಭು ರಾಮ ವಕೀಲ, ಶಂಕರರಾವ್ ಕಮಠಾಣೆ, ಶಂಕರ್ ರಾವ್ ದೇಶಪಾಂಡೆ ಹಳ್ಳಿಖೇಡ ಅನೇಕ ಸದಸ್ಯರಾಗಿದ್ದರು. ಅಸ್ಪೃಶ್ಯತಾ ನಿವಾರಣೆಗಾಗಿ ಪಾಟೀಲರು ಬಹಳ ಪ್ರಯತ್ನ ಮಾಡಿದರು, ಸಾಮಾಜಿಕ ನ್ಯಾಯಕ್ಕಾಗಿ ಮತ್ತು ಸಮಾನತೆಗಾಗಿ ಅವರು ಬಹಳಷ್ಟು ಶ್ರಮಪಟ್ಟಿದ್ದಾರೆ. ದಲಿತರ ಮನೆಗಳಿಗೆ ಹೋಗಿ ಅವರ ಸಮಸ್ಯೆಗಳನ್ನು ಕೇಳುತ್ತಿದ್ದರು ಆದಷ್ಟು ಪರಿಹರಿಸುತ್ತಿದ್ದರು. ಗ್ರಾಮಗಳಲ್ಲಿ ಸವರ್ಣೀಯರ ಸಭೆಗಳನ್ನು ನಡೆಸಿ ಅಸ್ಪೃಶ್ಯತೆಯಿಂದ ರಾಷ್ಟ್ರಕ್ಕಾದ ಹಾನಿಯನ್ನು ಹೇಳುತ್ತಿದ್ದರು. ಮನುಷ್ಯರಲ್ಲಿ ಭೇದ ಭಾವ ಮಾಡಕೂಡದು ನಮ್ಮ ಪೂರ್ವಜರಲ್ಲಿ ಅನೇಕರು ಅಸ್ಪೃಶ್ಯ ಜನಾಂಗಕ್ಕೆ ಸೇರಿದವರಾಗಿದ್ದರು ಅವರು ಮಹಾತ್ಮರೆಂದು ಪೂಜಿಸಲ್ಪಡುವರು. ಬಸವೇಶ್ವರರು ಮತ್ತು

ಗಾಂಧೀಜಿಯವರು ಅಸ್ಪೃಶ್ಯತೆ ಆಚರಿಸುವುದು ಮೂರ್ಖತನವೆಂದು ಹೇಳಿದ್ದಾರೆ, ಪಾಟೀಲರ ಭಾಷಣದ ಪ್ರಭಾವದಿಂದ ಬಸವಕಲ್ಯಾಣ ಹುಮನಬಾದ್ ತಾಲ್ಲೂಕುಗಳಲ್ಲಿ ಅಸ್ಪೃಶ್ಯತೆ ಬಹಳಷ್ಟು ಕಡಿಮೆಯಾಗಿದೆ.

ಪಾಟೀಲರು ಇಂದಿರಾ ಗಾಂಧಿಯವರು ಬಡವರಿಗಾಗಿ 20 ಅಂಶಗಳ ಕಾರ್ಯಕ್ರಮ ಜಾರಿಗೆ ತಂದಾಗ ಸಹಕರಿಸಿದರು, ಹಾಗೂ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಜಮೀನ್ದಾರರು, ಶ್ರೀಮಂತರು ಬಡ್ಡಿ ವ್ಯವಹಾರ ಮಾಡಿ ಬಡವರನ್ನು ಶೋಷಿಸುತ್ತಿದ್ದರು ಇದರಿಂದ ಬಡವರ ಬದುಕು ದುರ್ಬರವಾಗಿತ್ತು. ಹಳ್ಳಿಗಳಲ್ಲಿ ನಡೆಯುತ್ತಿರುವ ಈ ಶೋಷಣೆಯನ್ನು ತಪ್ಪಿಸಲು ಬಡ್ಡಿ ವ್ಯವಹಾರ ಮಾಡುವವರಿಗೆ ಕಠಿಣ ಶಿಕ್ಷೆ ಕೊಡಬೇಕೆಂದು ಸರ್ಕಾರಕ್ಕೆ ಸಲಹೆಯನ್ನಿಟ್ಟರು. ಬಡವರು ಹಡ ಬಿಟ್ಟ ಆಭರಣಗಳನ್ನು ಹಿಂತುರುಗಿಸಿ ಕೊಡಸಿದರು ಇದರಿಂದ ಶ್ರೀಮಂತರಿಗೆ ಭಯ ಹುಟ್ಟಿತು, ಆಗ ಬ್ರಹ್ಮದತ್ತ ಎಂಬುವವರು ಅಸಿಸ್ಟೆಂಟ್ ಕಮಿಷನರ್ ಆಗಿದ್ದರು. ಕಟ್ಟುನಿಟ್ಟಾದ ಕಾನೂನು ಪಾಲಕರಾದ ಇವರಿಗೆ ಜಮೀನುದಾರರು, ಶ್ರೀಮಂತರು ಹೆದರುತ್ತಿದ್ದರು ವಿ.ಎನ್ ಪಾಟೀಲರೊಡನೆ ಬ್ರಹ್ಮದತ್ತರ ಸ್ನೇಹವಿತ್ತು.

ವಿ.ಎನ್ ಪಾಟೀಲರು ಎರಡನೇ ಸಲ ಶಾಸಕರಾದಾಗ ಹುಮನಾಬಾದ್ ಮತ್ತು ಬೀದರ್ ತಾಲೂಕಿನ ಭೂ ನ್ಯಾಯ ಮಂಡಳಿಯ ಸದಸ್ಯರನ್ನಾಗಿ ಸರ್ಕಾರ ಇವರನ್ನು ನೇಮಿಸಿತು. ಆ ಅವಧಿಯಲ್ಲಿ ಪಾಟೀಲರು ಭೂ ಸಾಗುವಳಿ ಮಾಡುತ್ತಿದ್ದ ಗೇಣಿದಾರರಿಗೆ ಭೂಮಿಯನ್ನು ಜಮೀನುದಾರರಿಂದ ದೊರಕಿಸಿಕೊಟ್ಟರು. ಅಕ್ರಮವಾಗಿ ಭೂಮಿ ಸಾಗುವಳಿ ಮಾಡುತ್ತಿದ್ದವರಿಗೆ ಅವರ ಹೆಸರಿಗೆ ಪಟ್ಟ ಮಾಡಿಸಿದರು. ಕೋಮು ಸೌಹಾರ್ದತೆ ಬಗ್ಗೆ ಪಾಟೀಲರು ಬೀದರ ಜಿಲ್ಲಾದ್ಯಂತ ಸಂಚರಿಸಿ ಜನರಿಗೆ ತಿಳುವಳಿಕೆ ಕೊಟ್ಟರು ಎಲ್ಲಿ ಧರ್ಮೀಯರು ಸೌಹಾರ್ದತೆಯಿಂದ ಬಾಳಿ ದೇಶದ ಉನ್ನತಿಗೆ ಕಾರಣರಾಗಬೇಕೆಂಬುದೇ ಅವರ ಉದ್ದೇಶವಾಗಿತ್ತು ಇದರಿಂದ ಜನರಲ್ಲಿ ಸದ್ಭಾವನೆ ಮೂಡಿತು.

ಪಾಟೀಲರು ಮಾರ್ಕ್ಸ್ ವಾದವನ್ನು ಅಧ್ಯಯನ ಮಾಡಿದರು, ಉರ್ದು ಭಾಷೆಯ ಮೇಲೆ ಅವರಿಗೆ ಹಿಡಿತವಿತ್ತು ಹಳೆ ಮೈಸೂರು ಹಾಗೂ ಬಾಂಬೆ ಕರ್ನಾಟಕದ ಜನರು ಇವರ ಉರ್ದು ಭಾಷಣವನ್ನು ಕೇಳಿ ಮುಸಲ್ಮಾನರೆಂದೇ ತಿಳಿಯುತ್ತಿದ್ದರು. ಉರ್ದು, ಕನ್ನಡ, ಹಿಂದಿ, ಮರಾಠಿ, ಇಂಗ್ಲಿಷ್ ಮುಂತಾದ ಭಾಷೆಗಳು ಅವರಿಗೆ ಕರಗತವಾಗಿದ್ದವು. ವಿ.ಎನ್ ಪಾಟೀಲ್ರವರು ಇನ್ನಿತರ

ಹೋರಾಟಗಳಲ್ಲಿ, ಚಳುವಳಿಗಳಲ್ಲಿ, ಮುಷ್ಕರಗಳಲ್ಲಿ, ಜನಹಿತ ಕಾರ್ಯಗಳಲ್ಲಿ ಶ್ರಮಿಸಿದ್ದಾರೆ.

- ಬರಗಾಲ ಸಮಯದಲ್ಲಿ 1972–73ರಲ್ಲಿ ಸಂಭವಿಸಿದಾಗ ವಿ.ಎನ್ ಪಾಟೀಲರು ಸರ್ಕಾರದ ಬೆನ್ನು ಹತ್ತಿ ಹಳ್ಳಿಗಳಲ್ಲಿ ಬಾವಿ ತೋಡಿಸುವ ಕೆಲಸ ಹಾಗೂ ಹೊಲಗಳಿಗೆ ಹೊಡ್ಡು ಹಾಕುವುದು, ರಸ್ತೆ

ನಿರ್ಮಾಣ, ಗಂಜಿ ಕೇಂದ್ರ ಮುಂತಾದ ಕೆಲಸಗಳನ್ನು ಮಾಡಿಸಿದರು ಮತ್ತೆ ಅಮೆರಿಕದ ಗೋಧಿಯನ್ನು ಬಡತನದಲ್ಲಿ ಹಂಚಿದರು.

- ತುರ್ತು ಪರಿಸ್ಥಿತಿಯ 20 ಅಂಶ ಕಾರ್ಯಕ್ರಮದಲ್ಲಿ ಕಮಿನಿಸ್ಟ್ ಪಕ್ಷದ ಪಾತ್ರ ಹಾಗೂ ವಿ.ಎನ್ ಪಾಟೀಲರ ಪಾತ್ರ ದೊಡ್ಡದು. ಆರ್ ಪಾಟೀಲರು ಹುಮನಾಬಾದ್ ಕ್ಷೇತ್ರದ ಶಾಸಕರಾಗಿದ್ದರು 20 ಅಂಶದ ಕಾರ್ಯಕ್ರಮದಂತೆ ಹೊಲ ಇಲ್ಲದವರಿಗೆ ಹೊಲ ಹಾಗೂ ಮನೆ ಇಲ್ಲದವರಿಗೆ ಮನೆ ಕೊಡಿಸುವ ಕಾರ್ಯಕ್ರಮವನ್ನು ಮಾಡಿದರು. ಇನಾಮಿ ಜಮೀನನ್ನು ಹೂಳುವವನೇ "ಭೂಮಿಯ ಒಡೆಯ" ಎನ್ನುವ ಕಾಯ್ದೆಯಂತೆ ಟಿನೆಂಟದಾರರಿಗೆ ಭೂಮಿಯ ಹಕ್ಕನ್ನು ದೊರಕಿಸಿ ಕೊಟ್ಟರು.
- ಬೆಲೆ ಏರಿಕೆಯ ಸಂದರ್ಭದಲ್ಲಿ ಜನರು ತತ್ತರಿಸಿದರು ಅವರ ಕಷ್ಟದಲ್ಲಿ ವಿ.ಎನ್ ಪಾಟೀಲರು ಭಾಗಿಯಾಗಿ ಅನೇಕ ಚಳುವಳಿಗಳನ್ನು ಮಾಡಿದರು ಇದರಿಂದ ಮುಂದೆ ಧಾನ್ಯಗಳ ಬೆಲೆ ಇರಲಿಲ್ಲ.
- ರೈತರ ಅನೇಕ ಸಮಸ್ಯೆಗಳ ಬಗ್ಗೆ ಸರ್ಕಾರ ಮೂಕ ಪ್ರೇಕ್ಷಕನಂತೆ ಇತ್ತು ವಿ.ಎನ್ ಪಾಟೀಲರು ಮತ್ತು ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ರೈತರ ಪರವಾಗಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಹೋರಾಟ ಮಾಡಿದರು. ರೈತರ ಮತ್ತು ಕೂಲಿಕಾರ್ಮಿಕರ ಹಿತರಕ್ಷಣೆ ಮಾಡಿದಷ್ಟು ಹೋರಾಟ ಬೇರೆ ಯಾವುದೇ ರಾಜಕೀಯ ಪಕ್ಷ ಮಾಡಲಿಲ್ಲ.
- ಮೊದಲು ಬಂಡವಾಳಶಾಹಿಗಳ ಸರ್ವಿಸ್‌ಗಳೇ (ಬಸ್‌ಗಳು) ಎಲ್ಲೆಡೆ ಸಂಚರಿಸುತ್ತಿದ್ದವು ಇದರಿಂದ ಸರ್ಕಾರಕ್ಕೆ ನಷ್ಟವಾಗತೊಡಗಿತು, ಶ್ರೀಮಂತರು ಶ್ರೀಮಂತರಾಗತೊಡಗಿದರು, ಸರ್ಕಾರಿ ಬಸ್ಸುಗಳೇ ಸಂಚರಿಸಬೇಕೆಂದು ಮುಷ್ಕರೂಡಿದರು ಇದರ ಪರಿಣಾಮದಿಂದ ಖಾಸಗಿ ಬಸ್ಸುಗಳು ಓಡಾಡುವುದು ನಿಂತು ಹೋಯಿತು.
- ಕೋಮು ಸೌಹಾರ್ದ ಜನರಲ್ಲಿ ತರಲು ವಿ.ಎನ್ ಪಾಟೀಲರು ಶ್ರಮಿಸಿದರು, ಊರು ತಿರುಗಿ ಭಾಷಣ ಕಾರ್ಯಕ್ರಮ ಏರ್ಪಡಿಸಿದರು, ನಿರುದ್ಯೋಗಿ ಪದವೀಧರರಿಗೆ ಉದ್ಯೋಗ ಭತ್ತ ಕೊಡಿಸುವುದರಲ್ಲಿ ಪಾಟೀಲರ ಪಾತ್ರ ಹೆಚ್ಚಿನದಾಗಿದೆ. ವಿಧವಾ ವೇತನ ಜಾರಿ ಮಾಡಲು ಮತ್ತು ಅವುಗಳನ್ನು ಸೂಕ್ತ ವ್ಯಕ್ತಿಗೆ ತಲುಪಿಸಲು ಕಮಿನಿಸ್ಟ್ ಪಕ್ಷವು ಕೆಲಸ ಮಾಡಿದೆ.
- ವಿ.ಎನ್ ಪಾಟೀಲರು ಹಾಗೂ ಕಮ್ಯುನಿಸ್ಟರ್‌ಗಳು ಬಿಸಿಲು, ಮಳೆ, ಚಳಿಗಾಳಿಗೆ ಬೆದರದೆ ಬೆಚ್ಚದೆ ಜನರ ಸೇವೆ ಮಾಡಿದ್ದಾರೆ ನಿಸ್ವಾರ್ಥದಿಂದ ದುಡಿದಿದ್ದಾರೆ. ಒಂದು ನಯಾ ಪೈಸೆಯೂ ಕೂಡ ಜನರಿಂದ ಪಡೆಯದೆ ಜನರ ಸೇವೆ ಮಾಡಿದ ಅಪ್ರತಿಮರು.

**ಬಡವರ ಬಂಧುವಾಗಿ ವಿ.ನ್ ಪಾಟೀಲರು**

ವಿ.ಎನ್ ಪಾಟೀಲರು ಬೆಂಗಳೂರಿನ ಹುಚ್ಚ ನ್ಯಾಯಾಲಯದಲ್ಲಿ ವಕೀಲ ವೃತ್ತಿಯಲ್ಲಿದ್ದರು. ಹಣ ಸಂಪಾದಿಸಲಿಲ್ಲ ಅದೇನು ಕಾರಣವೆಂದರೆ ಬಡವರ ವ್ಯಾಜ್ಯಗಳನ್ನು ಪುಕ್ಕಟೆಯಾಗಿ ಪರಿಹರಿಸುತ್ತಿದ್ದರು. ಬಡವರ ಬಂಧುವಾಗಿದ್ದರು ಇಷ್ಟಲ್ಲದೇ ಫಿರ್ಯಾದದಾರರಿಗೆ ಊಟೋಪಚಾರ ಅವರ ಮನೆಯಲ್ಲಿ ನಡೆಯುತ್ತಿತ್ತು. ವಿ.ಎನ್ ಪಾಟೀಲರ ಕೌಟುಂಬಿಕ ಕಲಹಗಳಿಂದ, ಆರ್ಥಿಕ ಪರಿಸ್ಥಿತಿ ಕೈ ಕೊಟ್ಟಿತು, ಅನೇಕ ರೋಗಗಳು ಮನೆ ಮಾಡಿದವು, ಮೀನಕೇರಿಗೆ ಬರಬೇಕಾಯಿತು ಬೆಂಗಳೂರು ಬಿಟ್ಟು ಬರುವಾಗ ಅವರ ಸ್ನೇಹಿತರು ನಿಮಗೆ ಮುಂದೆ ನ್ಯಾಯಾಧೀಶರಾಗುವ ಅವಕಾಶಗಳಿವೆ ಬೆಂಗಳೂರು ಬಿಡಬೇಡಿ ಎಂದರು, ಆದರೆ ಅನಿವಾರ್ಯವಾಗಿ ಬೆಂಗಳೂರು ಬಿಡಬೇಕಾಯಿತು.

**ವಿ.ಎನ್ ಪಾಟೀಲರ ಅಂತಿಮ ದಿನಗಳು**

ಅವರ ಇಬ್ಬರು ಮಕ್ಕಳು ದೊಡ್ಡ ಹುದ್ದೆಯಲ್ಲಿದ್ದರು, ಆಕಾಲ ಮರಣಕ್ಕೀಡಾದರೂ ಇದರಿಂದ ವಿ.ಎನ್ ಪಾಟೀಲರು ಮಾನಸಿಕವಾಗಿ ಕುಗ್ಗಿದರು. ಅವರನ್ನು ಪರಮಾರ್ಥದೆಡೆಗೆ ಸೆಳೆದವು ಸಹಜ ಮಾರ್ಗದ ದೀಕ್ಷೆ ತೊಡಿಸಿದರು, ಇದರಿಂದ ಅವರಿಗೆ ಮಾನಸಿಕ ಶಾಂತಿ ದೊರೆಯಿತು. ದಿನಾಂಕ 24 ಮಾರ್ಚ್ 1998ರಂದು ಹೃದಯಘಾತವಾಗಿ ಅಸುನೀಗಿದರು 25 ಮಾರ್ಚ್ ನಂದು ಅಂತ್ಯಕ್ರಿಯೆ ನೆರವೇರಿತು.

**ಅಡಿಟಿಪ್ಪಣಿಗಳು**


1. ಪಂಚಾಕಷರಿ ಪುಣ್ಯಶೆಟ್ಟಿ ,ಹುಟ್ಟು ಹೋರಾಟಗಾರ .ವಿ.ಎನ್ ಪಾಟೀಲ, ಪುಟ–26–30
2. ಡಾ. ಪ್ರಕಾಶ್ ಕೆ – ಸಮ ಬಾಳಿನ ಸಂಘರ್ಷ–ಕರ್ನಾಟಕದಲ್ಲಿಕಮ್ಯುನಿಸ್ಟ್ ಚಳುವಳಿಯ ಒಂದು ನೋಟ, ಪುಟ –90–91
3. ಪಿ.ಸುಂದರಯ–ವೀರತೆಲಂಗಾಣ (ತೆಲಂಗಾಣಜನತೆಯ ಸಶಸ್ತ್ರ ಹೋರಾಟ 1946–51),ಪುಟ 10–11
4. ಸಿ.ಆರ್ ಕೃಷ್ಣರಾವ್–ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿ ನಾನು ಕಂಡಂತೆ, ಪುಟ– 46–47
5. ಬಿ.ವಿ ಕಕ್ಕಿಲ್ಲಾಮ–ಕಮ್ಯುನಿಸಂ, ಪುಟ ಸಂಖ್ಯೆ : 06
6. ಆರ್.ಅರುಣ್‌ಕುಮಾರ್–ಕನ್ನಡಕ್ಕೆ ಟಿ.ಸುರೇಂದ್ರರಾವ್ : ಭಾರತದಲ್ಲಿಕಮ್ಯುನಿಸ್ಟ್ ಪಕ್ಷ 1920 – 1964ರ ಅವಧಿಯ ಒಂದು ಇತಿಹಾಸ, ಪುಟ ಸಂಖ್ಯೆ : 74